# ‘ಎಐ’ ಅವಕಾಶದ ಅಲೆ, ಅದರ ಮೇಲೆ ಸವಾರಿ ಮಾಡಿ

## ಬಿಐಇಟಿ 43ನೇ ಪದವಿ ಪ್ರದಾನ ಸಮಾರಂಭದಲ್ಲಿ ರ್‍ಯಾಪಿಡೋ ಸಂಸ್ಥೆ ಸಿಟಿಒ ಶ್ರೀವತ್ಸ ಕಟ್ಟಾ



ದಾವಣಗೆರೆ: ಇಂಟರ್ನೆಟ್, ಮೊಬೈಲ್ ಅಥವಾ ಈಗಿನ ಕೃತಕ ಬುದ್ಧಿಮತ್ತೆ (ಎಐ) ಆಗಿರಲಿ, ಈ ಕ್ರಾಂತಿಯ ಅಲೆಗಳನ್ನು ತಡೆಯಲು ಸಾಧ್ಯವಿಲ್ಲ. ಬದಲಿಗೆ, ಯಶಸ್ವಿ ಭವಿಷ್ಯಕ್ಕಾಗಿ ಅದರ ಮೇಲೆ ಸವಾರಿ ಮಾಡಲು ಕಲಿಯಬೇಕು ಎಂದು ರ್‍ಯಾಪಿಡೋ ಸಂಸ್ಥೆಯ ಸಿಟಿಒ ಶ್ರೀವತ್ಸ ಕಟ್ಟಾ ಯುವ ಪದವೀಧರರಿಗೆ ಕರೆ ನೀಡಿದರು.

ಶನಿವಾರ ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ 43ನೇ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಪ್ರಸ್ತುತ ಪದವೀಧರರು ಎದುರಿಸುತ್ತಿರುವ ಎಐ ಕ್ರಾಂತಿಯನ್ನು ಒಂದು ಅವಕಾಶದ ಅಲೆ ಎಂದು ಬಣ್ಣಿಸಿದರು.

ನಾವು ಪದವಿ ಪಡೆದಾಗ ಇಂಟರ್ನೆಟ್ ಬಗ್ಗೆ ಇಂತಹದ್ದೇ ಗೊಂದಲವಿತ್ತು. ಅದು ಅನೇಕ ಉದ್ಯೋಗಗಳನ್ನು ನಾಶ ಮಾಡಿದರೂ, ಲಕ್ಷಾಂತರ ಹೊಸ ಉದ್ಯೋಗಗಳನ್ನು ಸೃಷ್ಟಿಸಿತು. ಸ್ಮಾರ್ಟ್‌ಫೋನ್‌ಗಳು ಜಗತ್ತನ್ನೇ ನಮ್ಮ ಜೇಬಿಗೆ ತಂದವು. ಅದೇ ರೀತಿ, ಎಐ ಕೂಡ ಒಂದು ಅವಕಾಶದ ಅಲೆಯಾಗಿದೆ ಎಂದರು.

ಕೃತಕ ಬುದ್ಧಿಮತ್ತೆ ಹೆಚ್ಚು ಕೆಲಸ ಮಾಡಬಹುದು, ಆದರೆ ಸಮಸ್ಯೆಗಳನ್ನು ಪರಿಹರಿಸುವ ಮತ್ತು ಜನರನ್ನು ನಡೆಸಿಕೊಳ್ಳುವ ನಿರ್ಧಾರವನ್ನು ನಿಮ್ಮ ಮಾನವೀಯತೆ ಮತ್ತು ಸಹಾನುಭೂತಿ ಮಾತ್ರ ನಿರ್ಧರಿಸಲು ಸಾಧ್ಯ. ನಿಮ್ಮ ಮಾನವೀಯತೆಯನ್ನು ಹೊರಗುತ್ತಿಗೆ ನೀಡಬೇಡಿ ಎಂದರು.

> ‘ನೀವು ಎಷ್ಟು ಜನರ ಜೀವನವನ್ನು ಸ್ಪರ್ಶಿಸುತ್ತೀರಿ ಎಂಬುದು ನಿಜವಾದ ಯಶಸ್ಸು, ನಿಮ್ಮ ಯಶಸ್ಸನ್ನು ನೀವು ಸ್ಪರ್ಶಿಸಿದ ಜೀವನಗಳಿಂದ ಅಳೆಯಿರಿ, ನಿಮ್ಮ ಸ್ಥಾನಮಾನದಿಂದಲ್ಲ’
>
> – ಶ್ರೀವತ್ಸ ಕಟ್ಟಾ

ಅನುಕೂಲಕರ ಜೀವನದಿಂದ ಹೊರಬಂದು, ಭಾರತದಲ್ಲಿ ಉದ್ಯಮಶೀಲತೆ ಬೆಳೆಯುತ್ತಿದ್ದ ಸಮಯದಲ್ಲಿ ರಿಸ್ಕ್ ತೆಗೆದುಕೊಂಡು ರಾಪಿಡೋ ಪ್ರಾರಂಭಿಸಿದ ತಮ್ಮ ಸ್ವಂತ ಪ್ರಯಾಣವನ್ನು ಹಂಚಿಕೊಂಡ ಶ್ರೀವತ್ಸ, ‘ನೀವು ಎಷ್ಟು ಜನರ ಜೀವನವನ್ನು ಸ್ಪರ್ಶಿಸುತ್ತೀರಿ ಎಂಬುದು ನಿಜವಾದ ಯಶಸ್ಸು’ ಎಂದು ತಿಳಿಸಿದರು.

ನಿಮ್ಮದಾರಿ ನಿಮ್ಮದೇ, (2ನೇ ಪುಟಕ್ಕೆ)

# ‘ಎಐ’ ಅವಕಾಶದ ಅಲೆ, ಅದರ ಮೇಲೆ ಸವಾರಿ ಮಾಡಿ

(1ನೇ ಪುಟದಿಂದ) ಅವನ್ನು ಇತರರೊದಿಗೆ ಎಂದಿಗೂ ಹೋಲಿಸಬೇಡಿ. ಸರಿಯಾದ ಮನೋಭಾವದಿಂದ ಮುಂದುವರಿಯಿರಿ, ನೀವು ಖಂಡಿತಾ ಗುರಿ ತಲುಪುತ್ತೀರಿ ಎಂದು ಯುವಪೀಳಿಗೆಗೆ ಸಲಹೆ ನೀಡಿದರು.

ನೀವು ರೋಮಾಂಚಕ ಮತ್ತು ಅನಿರೀಕ್ಷಿತ ಜಗತ್ತಿಗೆ ಕಾಲಿಡುತ್ತಿದ್ದೀರಿ. ನಿರಂತರವಾಗಿ ಕಲಿಯಿರಿ, ಕುತೂಹಲದಿಂದಿರಿ, ದೊಡ್ಡ ಕನಸುಗಳನ್ನು ಕಾಣಿರಿ, ಹೊಂದಿಕೊಳ್ಳಿ ಮತ್ತು ಸಹಾನುಭೂತಿಯಿಂದ ನಿರ್ಮಿಸಿ. ಎಲ್ಲಕ್ಕಿಂತ ಹೆಚ್ಚಾಗಿ, ನಿಮ್ಮ ಯಶಸ್ಸನ್ನು ನೀವು ಸ್ಪರ್ಶಿಸಿದ ಜೀವನಗಳಿಂದ ಅಳೆಯಿರಿ, ನಿಮ್ಮ ಸ್ಥಾನಮಾನದಿಂದಲ್ಲ ಎಂದು 2025ರ ಪದವೀಧರನ್ನುದ್ದೇಶಿಸಿ ಕಿವಿ ಮಾತು ಹೇಳಿದರು.

ಸ್ವಪ್ರ ಇಂಜಿನೀಯರಿಂಗ್ ಪ್ರೈಲಿ., ವ್ಯವಸ್ಥಾಪಕ ನಿರ್ದೇಶಕ ಅರವಿಂದ ಬೆಳ್ಳೂಡಿ ಮಾತನಾಡಿ, ವಿದ್ಯಾರ್ಥಿಗಳು ದೊಡ್ಡ ಕನಸು ಕಾಣಬೇಕು ಮತ್ತು ಗುರಿ ಇಡಬೇಕು ಎಂದು ಸಲಹೆ ನೀಡಿದರು. ದೇಶದ ಭವಿಷ್ಯದ ನಾಯಕರಾದ ವಿದ್ಯಾರ್ಥಿಗಳು ಸ್ವಂತ ಉದ್ಯಮ ನಡೆಸುವ ಉದ್ಯಮಶೀಲತೆಯ ಮನಸ್ಥಿತಿ ಹೊಂದಿರಬೇಕು ಎಂದು ಕರೆ ನೀಡಿದರು.

ಶ್ರಮ, ಶಿಸ್ತು ಮತ್ತು ವಿನಮ್ರತೆ ಯಶಸ್ಸಿನ ಮೂಲವಾಗಿದೆ. ನಿಮ್ಮ ಜ್ಞಾನವನ್ನು ಸಮಾಜಕ್ಕೆ ಕೊಡುಗೆ ನೀಡಲು ಬಳಸಿ, ನಿಮ್ಮ ಕುಟುಂಬ, ಕಾಲೇಜು ಮತ್ತು ದೇಶಕ್ಕೆ ಹೆಮ್ಮೆ ತರುವಂತೆ ಬದುಕಿರಿ. ಪ್ರಾಮಾಣಿಕವಾಗಿ ಕೆಲಸ ಮಾಡಿ, ಸತ್ಯವಂತರಾಗಿರಿ, ವಿನಮ್ರರಾಗಿರಿ. ಆಗ ಯಶಸ್ಸು ನಿಮ್ಮನ್ನು ಹಿಂಬಾಲಿಸುತ್ತದೆ ಎಂದು ಪದವೀಧರರಿಗೆ ಮಾರ್ಗದರ್ಶನ ನೀಡಿದರು.

ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್, ಡಾ.ಕುಮಾರಪ್ಪ ಸೇರಿದಂತೆ ಉಪನ್ಯಾಸಕರ ವರ್ಗದವರು ಉಪಸ್ಥಿತರಿದ್ದರು.

ಜಿ.ವೈ. ಸುನಿತಾ ಸ್ವಾಗತಿಸಿದರು. ಡಾ. ಪ್ರಕಾಶ್ ಕೆ.ಎಂ. ಮತ್ತು ರಾಧಿಕಪ್ರಿಯ ನಿರೂಪಿಸಿದರು. ಕು. ಅಂಕಿತಾ ಪ್ರಾರ್ಥಿಸಿದರು. ಕಾರ್ಯಕ್ರಮ ಆರಂಭಕ್ಕೂ ಮುನ್ನ ಸಾಹಿತಿ ಎಲ್. ಎಲ್. ಭೈರಪ್ಪ ಅವರ ನಿಧನಕ್ಕೆ ಮೌನಾಚರಣೆ ಮಾಡಲಾಯಿತು.

## ಸತ್ಯ ನಾಡೆಲ್ಲಾ ಮತ್ತು ಕಲಾಂ ಕಥೆ ಹೇಳಿದ ಶ್ರೀವತ್ಸ

‘ಯಾವುದೇ ವ್ಯಕ್ತಿಯ ಆರಂಭ ಎಲ್ಲಿಯಾಗಿದೆ ಎಂಬುದು ಅವರ ಭವಿಷ್ಯದ ಅಂತ್ಯವನ್ನು ನಿರ್ಧರಿಸುವುದಿಲ್ಲ’ ಎಂದು ರಾಪಿಡೋ ಸಂಸ್ಥೆಯ ಸಿಟಿಒ ಶ್ರೀವತ್ಸ ಕಟ್ಟಾ ಹೇಳಿದರು.

ಸಂಸ್ಕೃತ ಉಪನ್ಯಾಸಕ ಮತ್ತು ಸರ್ಕಾರಿ ಅಧಿಕಾರಿಯ ಮಗನಾಗಿ ಹೈದರಾಬಾದ್‌ನಲ್ಲಿ ಬೆಳೆದ ಸತ್ಯ ನಾಡೆಲ್ಲಾ ಅವರು, ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಇಂಜಿನಿಯರಿಂಗ್ ಮುಗಿಸಿ, ಮೈಕ್ರೋಸಾಫ್ಟ್‌ನ ಸಿಇಒ ಆಗಲು ದಶಕಗಳ ಪರಿಶ್ರಮ ಮತ್ತು ದೃಢ ಸಂಕಲ್ಪ ಬೇಕಾಯಿತು ಎಂದು ವಿವರಿಸಿದರು.

ಡಾ. ಎಪಿಜೆ ಅಬ್ದುಲ್ ಕಲಾಂ ಸಹ ರಾಮೇಶ್ವರಂನ ಬಡ ಕುಟುಂಬದಲ್ಲಿ ಹುಟ್ಟಿ, ಚಿಕ್ಕವರಿದ್ದಾಗ ಪೇಪರ್ ವಿತರಿಸುತ್ತಿದ್ದರು. ಆದರೆ, ತಮ್ಮ ಪ್ರಯತ್ನದ ಮೂಲಕ ಭಾರತದ ಕ್ಷಿಪಣಿ ಮತ್ತು ಬಾಹ್ಯಾಕಾಶ ವಿಭಾಗ ಸೇರಿ, ‘ಮಿಸ್ಸೈಲ್ ಮ್ಯಾನ್ ಆಫ್ ಇಂಡಿಯಾ’ ಆದರು.

ನಿಮ್ಮ ಕನಸು ನನಸಾಗುವ ಮೊದಲು ನೀವು ಕನಸು ಕಾಣಬೇಕು ಎಂಬ ಕಲಾಂ ಅವರ ಮಾತುಗಳು ಸಾರ್ವಕಾಲಿಕ ಸತ್ಯ ಎಂದು ಶ್ರೀವತ್ಸ ಬಣ್ಣಿಸಿದರು. ಇದೇ ವೇಳೆ ‘ಬ್ಲಾಕ್‌ಬಸ್ಟರ್ ಮತ್ತು ನೆಟ್‌ಫ್ಲಿಕ್ಸ್’ನ ಉಧಾಹರಣೆ ನೀಡಿದ ಅವರು, ‘ಬದಲಾವಣೆಯನ್ನು ಒಪ್ಪಿಕೊಳ್ಳಲು ನಿರಾಕರಿಸಿದ ಸಂಸ್ಥೆಗಳು ಸೋತರೆ, ಅದನ್ನು ಅಳವಡಿಸಿಕೊಂಡವರು ಯಶಸ್ಸು ಕಂಡಿದ್ದಾರೆ’ ಎಂದು ಸ್ಪಷ್ಟಪಡಿಸಿದರು.

## ವಿಟಿಯು ರ‍್ಯಾಂಕ್ ವಿಜೇತರು

ಟೆಕ್ಸ್‌ಸ್ಟೈಲ್ ವಿಭಾಗದಲ್ಲಿ ವರ್ಷಿಣಿ ಕೆ. ಎಸ್. (ಪ್ರಥಮ), ದಿವ್ಯ ಎಂ. ಎಲ್. (ದ್ವಿತೀಯ) ಮತ್ತು ಅನುಷಾ ಎಸ್. (ತೃತೀಯ) ಸ್ಥಾನವನ್ನು ಗಳಿಸಿದ್ದಾರೆ.

ಕೆಮಿಕಲ್ ವಿಭಾಗದಲ್ಲಿ ಕೀರ್ತಿಧ್ವಜ್ ಉಪಾಧ್ಯ (ದ್ವಿತೀಯ) ಮತ್ತು ಸೃಷ್ಟಿ ವಿ. ಲದ್ವಾ (ತೃತೀಯ) ಸ್ಥಾನ ಗಳಿಸಿದ್ದಾರೆ.

ಜೈವಿಕತಂತ್ರಜ್ಞಾನ ವಿಭಾಗದ ಅಂಕಿತ ಅರುಣ್ ಕುಮಾರ್ 9ನೇ ಸ್ಥಾನ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.